22) Hotel Mayura Vijayanagar, T.B. Dam:

Single - Rs.125/- Double - 160/-
3 Bedded - Rs.190/-

23) Hotel Mayura Saptagiri, Tirumala, Andhra Pradesh:

Double - Rs.150/-

24) Hotel Mayura Pavitra, Yediyur:

Single - Rs.130/- Double - Rs.160/-

ರಾಜ್ಯದಲ್ಲಿ ವೆಟರಿನರಿ ವಿಶ್ವವಿದ್ಯಾಲಯದ ಅವಶ್ಯಕತೆ

1240 (1491) ಶ್ರೀ ಬೆಲ್ಲದ್ ಚಂದ್ರಕಾಂತ ಗುರಪ್ಪ (ಧಾರವಾಡ) : ಮಾನ್ಯ ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿರುವ ಜಾನುವಾರುಗಳ ಸಂಖ್ಯೆ ಎಷ್ಟು ;

ಆ) ರಾಜ್ಯದಲ್ಲಿರುವ ವೆಟರಿನರಿ ಕಾಲೇಜುಗಳ ಸಂಖ್ಯೆ ಎಷ್ಟು;

ಇ) ರಾಜ್ಯಕ್ಕೆ ಅವಶ್ಯಕವಾಗಿ ಬೇಕಾಗಿರುವ ವೆಟರಿನರಿ ಕಾಲೇಜುಗಳ ಸಂಖ್ಯೆ ಎಷ್ಟು ; ಕೇಂದ್ರಗಳನ್ನು ಸ್ಥಾಪಿಸಲಾಗುವುದೆ;

ಈ) ರಾಜ್ಯದಲ್ಲಿ ವೆಟರಿನರಿ ವಿಶ್ವವಿದ್ಯಾಲಯದ ಅವಶ್ಯಕತೆಯಿದ್ದು ಅದನ್ನು ಸ್ಥಾಪಿಸಲು ಸರ್ಕಾರ ಮುಂದಾಗುವುದೆ;

ಉ) ರಾಜ್ಯದಲ್ಲಿ ಪ್ರತಿವರ್ಷ ಉತ್ತೀರ್ಣರಾಗುವ ವೆಟರಿನರಿ ಡಾಕ್ಟರುಗಳ ಸಂಖ್ಯೆ ಎಷ್ಟು;

ಊ) ರಾಜ್ಯದಲ್ಲಿರುವ ಜಾನುವಾರು ಸಂಖ್ಯೆಗೆ ಅನುಗುಣವಾಗಿ ಬೇಕಾದ ಡಾಕ್ಟರರ ಸಂಖ್ಯೆ ಎಷ್ಟು; ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು?

ಶ್ರೀ ಎ. ಕೃಷ್ಣಪ್ಪ (ಪಶು ಸಂಗೋಪನೆ ಮತ್ತು ಸಕ್ಕರೆ ಸಚಿವರು) :

ಅ) 286.51 ಲಕ್ಷಗಳು

ಆ) 2

ಇ) ಸದ್ಯಕ್ಕೆ ಹೆಚ್ಚಿನ ಪಶು ವೈದ್ಯಕೀಯ ಕಾಲೇಜುಗಳ ಅವಶ್ಯಕತೆ ಇರುವುದಿಲ್ಲ.

ಈ) ಸರ್ಕಾರದ ಪಶು ಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆಯಲ್ಲಿ ತೀವ್ರ ಪರಿಶೀಲನೆಯಲ್ಲಿದೆ.

ಉ) ಸುಮಾರು 100- 110

ಊ) ಅವಶ್ಯವಿರುವ ಡಾಕ್ಟರರುಗಳು - 3164

ಹಾಲಿ ಇರುವ ಡಾಕ್ಟರರುಗಳು - 1787

ಖಾಲಿ ಇರುವ ಡಾಕ್ಟರರುಗಳ ಹುದ್ದೆಗಳು - 421.

ರಾಜ್ಯದಲ್ಲಿರುವ ಪ್ರವಾಸಿ ಕೇಂದ್ರಗಳು

1241 (1492) ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ (ಧಾರವಾಡ) : ಮಾನ್ಯ ಪ್ರವಾಸೋದ್ಯಮ ಮತ್ತು ಹಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಮನ್ನಣೆ ಪಡೆದ ಪ್ರವಾಸಿ ಕೇಂದ್ರಗಳು ಯಾವುವು (ಜಿಲ್ಲಾವಾರು ಮಾಹಿತಿ ಒದಗಿಸುವುದು) ;

ಆ) ಈ ಪ್ರವಾಸಿ ಕೇಂದ್ರಗಳಲ್ಲಿ ಇರುವ ಸೌಲಭ್ಯಗಳೇನು;

ಇ) 1997-98, 1998-99 ಹಾಗೂ 1999-2000ನೇಸಾಲುಗಳಲ್ಲಿ ಈ ಪ್ರವಾಸಿ ಕೇಂದ್ರಗಳ ಉಸ್ತುವಾರಿ ಹಾಗೂ ನಿರ್ವಹಣೆಗಾಗಿ ನಿಗಧಿ ಮಾಡಿದ ಮೊತ್ತ ಹಾಗೂ ವೆಚ್ಚ ಮಾಡಿದ ಮೊತ್ತವೆಷ್ಟು

ಈ) ಹೊಸದಾಗಿ ಸರ್ಕಾರ ತೆಗೆದುಕೊಳ್ಳಲಿರುವ ಪ್ರವಾಸ ಕೇಂದ್ರಗಳಾವುವು;

ಉ) ಪ್ರಯಾಣಿಕರು ಅಲ್ಲಲ್ಲಿ ತಂಗಲು ಮಾಡಿರುವ ವ್ಯವಸ್ಥೆಗಳೇನು?

ಶ್ರೀ ಆರ್. ರೋಷನ್ ಬೇಗ್ (ಪ್ರವಾಸೋದ್ಯಮ ಮತ್ತು ಹಜ್ ಸಚಿವರು) :

ಅ) ರಾಜ್ಯದಲ್ಲಿ ಮನ್ನಣೆ ಪಡೆದ ಪ್ರವಾಸಿ ಕೇಂದ್ರಗಳ ಜಿಲ್ಲಾವಾರು ಮಾಹಿತಿಯನ್ನು ಪ್ರತ್ಯೇಕ ಪಟ್ಟಿಯಲ್ಲಿ ಲಗತ್ತಿಸಲಾಗಿದೆ ಅನುಬಂಧ- 1

ಆ) ವಿವರದ ಪಟ್ಟಿಯನ್ನು ಲಗತ್ತಿಸಲಾಗಿದೆ. ಅನುಬಂಧ-2

ಇ) ಪ್ರವಾಸಿ ಕೇಂದ್ರಗಳ ಉಸ್ತುವಾರಿ ಹಾಗೂ ನಿರ್ವಹಣೆಯು ಪ್ರವಾಸೋದ್ಯಮ ಇಲಾಖೆ ವ್ಯಾಪ್ತಿಗೆ ಒಳಪಡುವುದಿಲ್ಲ.

ಈ) ಸದ್ಯಕ್ಕೆ ಯಾವುದೂ ಇರುವುದಿಲ್ಲ.

ಉ) ಈ ಮಾಹಿತಿಗಳನ್ನು ಅನುಬಂಧ-2ರಲ್ಲಿ ಒದಗಿಸಲಾಗಿದೆ.